# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 25-05-2023 ಗುರುವಾರದಂದು ಪೂರ್ವಾಹ್ನ 11.30 ಗಂಟೆಗೆ ನಡೆದ "ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆ"ಯ ನಡವಳಿಗಳು.**

**ಉಪಸ್ಥಿತರು:**

| | | |
|---|---|---|
| 1. | ಪ್ರೊ. ಎನ್.ಕೆ.ಲೋಕನಾಥ್ | ಕುಲಪತಿ ಹಾಗೂ ಅಧ್ಯಕ್ಷರು |
| 2. | ಪ್ರೊ. ಮುಜ್ಞಾಫರ್ ಹೆಚ್ ಅಸ್ಸಾದಿ | ಸದಸ್ಯರು |
| 3. | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 4. | ಡಾ. ಚೈತ್ರ ನಾರಾಯಣ | ಸದಸ್ಯರು |
| 5. | ಡಾ. ನಿರ್ಮಲ ಹೆಚ್.ಎಂ | ಸದಸ್ಯರು |
| 6. | ಶ್ರೀ ಎಸ್.ಹೆಚ್.ಗಂಗೇಗೌಡ | ಸದಸ್ಯರು |
| 7. | ಶ್ರೀಮತಿ ಸೌಮ್ಯ ಈರಪ್ಪ ಕೆ | ಸದಸ್ಯರು |
| 8. | ಡಾ. ಜಯ ಶಂಕರ್ ಎನ್ | ಸದಸ್ಯರು |
| 9. | ಪ್ರೊ. ಕೆ.ಎಂ.ಮಹದೇವನ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 10. | ಶ್ರೀಮತಿ ಶೈಲಜ.ವಿ.ಆರ್., ಕೆಎಎಸ್ | ಕುಲಸಚಿವೆ ಹಾಗೂ ಸದಸ್ಯ ಕಾರ್ಯದರ್ಶಿ |
| 11. | ಪ್ರೊ. ಬಿ.ಮಹದೇವಪ್ಪ, ಹಣಕಾಸು ಅಧಿಕಾರಿಗಳು (ಪ್ರಭಾರ) | ವಿಶೇಷ ಆಹ್ವಾನಿತರು |

**ಅನುಪಸ್ಥಿತರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ಮೊದಲಿಗೆ, ಹೊಸದಾಗಿ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ (ಪರೀಕ್ಷಾಂಗ)ರಾಗಿ ಅಧಿಕಾರವನ್ನು ವಹಿಸಿಕೊಂಡಿರುವ ಪ್ರೊ. ಕೆ.ಎಂ.ಮಹದೇವನ್, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಸ್ನಾತಕೋತ್ತರ ಕೇಂದ್ರ, ಕಡೂರು ಇವರನ್ನು ಪರಿಚಯಿಸಿ ಸ್ವಾಗತಿಸಲಾಯಿತು ಹಾಗೂ ಪ್ರೊ. ಎ.ಪಿ.ಜ್ಞಾನಪ್ರಕಾಶ್, ಪ್ರಾಧ್ಯಾಪಕರು ಇವರು ಕುಲಸಚಿವ (ಪರೀಕ್ಷಾಂಗ)ರಾಗಿ ಹಾಗೂ ಸಿಂಡಿಕೇಟ್ ಸದಸ್ಯರಾಗಿ ಸಲ್ಲಿಸಿರುವ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ಹಾಗೆಯೇ, ಕರ್ನಾಟಕ ರಾಜ್ಯದಲ್ಲಿ ನೂತನವಾಗಿ ಅಧಿಕಾರಕ್ಕೆ ಬಂದ ಸರ್ಕಾರ ಮತ್ತು ಮಂತ್ರಿಮಂಡಲವನ್ನು ಅಭಿನಂದಿಸಲಾಯಿತು.

ನಂತರ, ಮಾನ್ಯ ಕುಲಪತಿಯವರ ಅಪ್ಪಣೆಯ ಮೇರೆಗೆ ಕುಲಸಚಿವರು ಕಾರ್ಯಸೂಚಿಗಳನ್ನು ಮಂಡಿಸಿದರು.

<table>
<tr><th>ವಿಷಯ ಸಂಖ್ಯೆ</th><th>ವಿಷಯ ಸಂಕ್ಷಿಪ್ತವಾಗಿ</th></tr>
<tr><td colspan="2">ದಿನಾಂಕ: 27-03-2023ರಂದು ಜರುಗಿದ "ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.</td></tr>
<tr><td colspan="2">ದಿನಾಂಕ: 27-03-2023ರಂದು ಜರುಗಿದ "ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆ"ಯ ನಡವಳಿಯನ್ನು ಹಾಗೂ ತೆಗೆದುಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ದೃಢೀಕರಿಸಿತು.</td></tr>
<tr><td>ಸಾಮಾನ್ಯ ಸಭೆ<br>2023/3.1</td><td>CBCS & Non-CBCS ಪದ್ಧತಿಯ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುವ ಸಂಬಂಧ ತೆಗೆದುಕೊಳ್ಳಬೇಕಾದ ನಿರ್ಣಯದ ಬಗ್ಗೆ ಚರ್ಚಿಸಲು ದಿನಾಂಕ : 17-01-2023ರಂದು ನಡೆದ ತಾಂತ್ರಿಕ ಸಮಿತಿ ಸಭೆ ಹಾಗೂ ದಿನಾಂಕ : 16-03-2023ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.</td></tr>
<tr><td></td><td>ಡಾ. ಚೈತ್ರ ನಾರಾಯಣ ಅವರು ಮಾತನಾಡಿ, ಮೆ: ಮೆಟಾ-ಐ-ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಸಂಸ್ಥೆಯು ಪದವಿ ಪರೀಕ್ಷೆಯ ಫಲಿತಾಂಶವನ್ನು ನಿಗದಿತ ಅವಧಿಯಲ್ಲಿ ಪ್ರಕಟಿಸದೇ ವಿಳಂಬ ಮಾಡುತ್ತಿದ್ದಾರೆಂದು ಅನೇಕ ದೂರುಗಳು ಬಂದಿದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾಗಿತ್ತೆಂದು ತಿಳಿಸಿದರು.<br><br>ಪ್ರೊ. ಮುಜಾಫರ್ ಹೆಚ್ ಅಸ್ಸಾದಿ ಅವರು ಮಾತನಾಡಿ, ಮೆ: ಮೆಟಾ-ಐ-ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಸಂಸ್ಥೆಗೆ ನೀಡಲಾಗಿದ್ದ ಗುತ್ತಿಗೆ ಅವಧಿಯು ಮುಗಿದಿದ್ದು, ಮರುಟೆಂಡರ್ ಆಹ್ವಾನಿಸದೇ, ಸದರಿ ಸಂಸ್ಥೆಯವರಿಗೆ ಅವಧಿ ವಿಸ್ತರಣೆ ನೀಡಿದರೆ ಆಡಿಟ್ ಆಕ್ಷೇಪಣೆಯಾಗುವುದಿಲ್ಲವೇ ಎಂದು ಸಭೆಗೆ ತಿಳಿಸಿದರು.<br><br>ಕುಲಸಚಿವ (ಪರೀಕ್ಷಾಂಗ) ಅವರು ಮಾತನಾಡಿ, CBCS & Non-CBCS ಪದ್ಧತಿಯ ಕೋರ್ಸ್‌ಗಳಲ್ಲಿ ಕಡಿಮೆ ವಿದ್ಯಾರ್ಥಿಗಳಿರುವುದರಿಂದ, ಹೊಸದಾಗಿ ಟೆಂಡರ್ ಆಹ್ವಾನಿಸಲು ಸಾಧ್ಯವಾಗುವುದಿಲ್ಲ. ಹಾಲಿ ಇರುವ ಮೆ: ಮೆಟಾ-ಐ-ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಸಂಸ್ಥೆಯವರಿಗೆ ವಿಸ್ತರಣೆ ನೀಡುವುದು ಸೂಕ್ತವೆಂದು ಅಭಿಪ್ರಾಯಿಸಿ, ಸರ್ಕಾರವು ಕೂಡ ಮತ್ತೆ ಮರುಟೆಂಡರ್ ಆಹ್ವಾನಿಸಬಾರದೆಂದು ನಿರ್ದೇಶನವನ್ನು ಸಹ ನೀಡಿರುತ್ತಾರೆ ಹಾಗೂ ವಿಶ್ವವಿದ್ಯಾನಿಲಯ ಸದರಿ ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯಲ್ಲಿ ವಿಸ್ತರಣೆ ಮಾಡಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಲಾಗಿದೆಯೆಂದು ತಿಳಿಸಿದರು.</td></tr>
<tr><td>ತೀರ್ಮಾನ</td><td>CBCS & Non-CBCS ಪದ್ಧತಿಯ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುವ ಸಂಬಂಧ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ದಿನಾಂಕ : 17-01-2023ರಂದು ನಡೆದ ತಾಂತ್ರಿಕ ಸಮಿತಿ ಸಭೆ ಮತ್ತು ಇದೇ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 16-03-2023 ರಂದು ನಡೆದ ಹಣಕಾಸು ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.</td></tr>
<tr><td>ಸಾಮಾನ್ಯ ಸಭೆ<br>2023/3.2</td><td>ದಿವಂಗತ ಡಾ. ಕೆ. ಅಕ್ಕಮಹಾದೇವಿ, ಸಹ ಪ್ರಾಧ್ಯಾಪಕರು, ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮಗನಾದ ಶ್ರೀ ಪ್ರಜ್ವಲ್ ಕೆ. ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ.</td></tr>
<tr><td>ತೀರ್ಮಾನ</td><td>ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ಶ್ರೀ ಪ್ರಜ್ವಲ್.ಕೆ ಇವರಿಗೆ ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಲ್ಲಿ ನೇಮಕ ಮಾಡಲು ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಲಾಯಿತು.</td></tr>
</table>

| | |
|---|---|
| **ಸಾಮಾನ್ಯ ಸಭೆ 2023/3.3** | ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಡಾ. ಹೆಚ್.ಎಸ್.ಅಪರ್ಣ, ಪ್ರಾಧ್ಯಾಪಕರು ಇವರನ್ನು ದಿನಾಂಕ: 19-07-2021 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಇವರ ಅವಧಿಯು ದಿನಾಂಕ: 18-07-2023ಕ್ಕೆ ಮುಕ್ತಾಯಗೊಳ್ಳುತ್ತಿದ್ದು, ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳ ಜೇಷ್ಠತೆಗನುಸಾರವಾಗಿ ಸರದಿಯ ಮೇಲೆ ಪ್ರೊ. ಎಸ್.ಉಮೇಶ್, ಪ್ರಾಧ್ಯಾಪಕರು ಇವರು ಹಿರಿಯರಾಗಿರುತ್ತಾರೆ ಎಂಬುದನ್ನು ಸಿಂಡಿಕೇಟ್ ಗಮನಿಸಿತು. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಎಸ್.ಉಮೇಶ್, ಪ್ರಾಧ್ಯಾಪಕರು, ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 19-07-2023 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2023/3.4** | ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಡಾ. ಕೆ.ಮಂಟೆಲಿಂಗು, ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ: 13-07-2021 ರಿಂದ ಜಾರಿಗೆ ಬಂದಂತೆ ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗ ಇಲ್ಲಿಗೆ ಪ್ರಭಾರ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಇವರ ಅವಧಿಯು ದಿನಾಂಕ: 12-07-2023ಕ್ಕೆ ಮುಕ್ತಾಯಗೊಳ್ಳುತ್ತಿದೆ ಹಾಗೂ ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳ ಜೇಷ್ಠತಾ ಪಟ್ಟಿಯ ಪ್ರಕಾರ ಡಾ. ಬಸಪ್ಪ ಇವರೊಬ್ಬರನ್ನು ಬಿಟ್ಟು ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಬೇರೆ ಯಾರೂ ಖಾಯಂ ಪ್ರಾಧ್ಯಾಪಕರಾಗಲೀ/ಸಹ ಪ್ರಾಧ್ಯಾಪಕರಾಗಲೀ ಇರುವುದಿಲ್ಲ ಎಂಬುದನ್ನು ಸಿಂಡಿಕೇಟ್ ಗಮನಿಸಿತು. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಡಾ. ಬಸಪ್ಪ, ಪ್ರಾಧ್ಯಾಪಕರು, ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 13-07-2023 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ಮತ್ತೊಂದು ಅವಧಿಗೆ ನೇಮಕ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2023/3.5** | ಭೂಗೋಳಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಪ್ರೊ. ಪಿ.ಜಯಶ್ರೀ, ಪ್ರಾಧ್ಯಾಪಕರು ಇವರನ್ನು ದಿನಾಂಕ: 02-07-2021 ರಿಂದ ಜಾರಿಗೆ ಬಂದಂತೆ ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಇವರ ಅವಧಿಯು ದಿನಾಂಕ: |

| | |
|---|---|
| | 01-07-2023ಕ್ಕೆ ಮುಕ್ತಾಯಗೊಳ್ಳುತ್ತಿದ್ದು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳ ಜೇಷ್ಠತೆಗನುಸಾರವಾಗಿ ಸರದಿಯ ಮೇಲೆ ಪ್ರೊ. ಅರುಣ್ ದಾಸ್.ಎಸ್, ಪ್ರಾಧ್ಯಾಪಕರು ಇವರು ಹಿರಿಯರಾಗಿರುತ್ತಾರೆ ಎಂಬುದನ್ನು ಸಿಂಡಿಕೇಟ್ ಗಮನಿಸಿತು. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಅರುಣ್ ದಾಸ್.ಎಸ್, ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 02-07-2023 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2023/3.6** | ವ್ಯವಹಾರ ಆಡಳಿತ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಪ್ರೊ. ಡಿ.ಆನಂದ್, ಪ್ರಾಧ್ಯಾಪಕರು ಇವರನ್ನು ದಿನಾಂಕ: 05-08-2021 ರಿಂದ ಜಾರಿಗೆ ಬಂದಂತೆ ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಇವರ ಅವಧಿಯು ದಿನಾಂಕ: 04-08-2023ಕ್ಕೆ ಮುಕ್ತಾಯಗೊಳ್ಳುತ್ತಿದ್ದು, ವ್ಯವಹಾರ ಆಡಳಿತ ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳ ಜೇಷ್ಠತೆಗನುಸಾರವಾಗಿ ಸರದಿಯ ಮೇಲೆ ಪ್ರೊ. ಎಸ್.ಜೆ.ಮಂಜುನಾಥ್, ಪ್ರಾಧ್ಯಾಪಕರು ಇವರು ಹಿರಿಯರಾಗಿರುತ್ತಾರೆ ಎಂಬುದನ್ನು ಸಿಂಡಿಕೇಟ್ ಗಮನಿಸಿತು. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಎಸ್.ಜೆ.ಮಂಜುನಾಥ್, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 05-08-2023 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ವ್ಯವಹಾರ ಆಡಳಿತ ಅಧ್ಯಯನ ವಿಭಾಗದ (BIMS) ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2023/3.7** | Patent Commercialized ಆಗಿರುವ ಸಂಬಂಧ ಬಿಡುಗಡೆಯಾಗಿರುವ Royalty ಮೊತ್ತವನ್ನು Inventors ರವರಿಗೆ ನೀಡುವ ಬಗ್ಗೆ. |
| **ತೀರ್ಮಾನ** | ದಿನಾಂಕ: 26-04-2023 ರಂದು ನಡೆದ ಭೌದ್ಧಿಕ ಆಸ್ತಿ ಹಕ್ಕುಗಳ ಸಮಿತಿ ಸಭೆಯ ತೀರ್ಮಾನದನ್ವಯ, ಪ್ರೊ. ಕೆ.ಎಸ್.ರಂಗಪ್ಪ, ಡಿಸ್ಟಿಂಗ್ವಿಷ್ಡ್ ಪ್ರೊಫೆಸರ್, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಡಾ. ಸಿ.ಡಿ.ಮೋಹನ್, ಅಣುಸೂಕ್ಷ್ಮಜೀವಾಣುಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಹಾಗೂ ಡಾ. ಶೋಭಿತ್ ರಂಗಪ್ಪ ಇವರುಗಳು ಕೈಗೊಂಡಿದ್ದ Compuounds useful in inhibiting human trefoil factor3 ಮತ್ತು Small molecule inhibitors of BCL-2 associated death promoter (BAD) phosphorylation ಸಂಶೋಧನೆಗೆ ಸಂಬಂಧಿಸಿದಂತೆ National University of Singapore ಇವರು Royalty ಮೊತ್ತವಾಗಿ ವಿಶ್ವವಿದ್ಯಾನಿಲಯದ ಖಾತೆಗೆ ಬಿಡುಗಡೆ ಮಾಡಿರುವ ಮೊತ್ತ ರೂ.5,10,330.39 ಗಳಲ್ಲಿ ಶೇ.10 ರಷ್ಟನ್ನು ವಿಶ್ವವಿದ್ಯಾನಿಲಯದ ಮೇಲ್ಬಚಾಗಿ ಉಳಿಸಿಕೊಂಡು ಉಳಿದ ಶೇ.90 ರಷ್ಟನ್ನು Patent Inventors ರವರುಗಳಿಗೆ ಹಂಚಿಕೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| **ಸಾಮಾನ್ಯ ಸಭೆ 2023/3.8** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಎನ್. ರಾಚಯ್ಯ ಅಧ್ಯಯನ ಪೀಠದ ಸ್ಥಾಪನೆಗೆ ಹಾಗೂ ಅದರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ಪರಿಷ್ಕೃತ ಕರಡು ಅಧಿನಿಯಮದ ಅನುಮೋದನೆ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಎನ್. ರಾಚಯ್ಯ ಅಧ್ಯಯನ ಪೀಠದ ಸ್ಥಾಪನೆಗೆ ಹಾಗೂ ಅದರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 41(6)ರ ಪ್ರಕಾರ ಹಾಗೂ ಸರ್ಕಾರದ ನಿರ್ದೇಶನದಂತೆ ರಚಿಸಲಾಗಿರುವ ಪರಿಷ್ಕೃತ ಕರಡು ಅಧಿನಿಯಮವನ್ನು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2023/3.9** | ವಿಶ್ವವಿದ್ಯಾನಿಲಯದ ಯುಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ಹಾಗೂ ಕೇಂದ್ರದಲ್ಲಿನ ಬೋಧಕ ಸಿಬ್ಬಂದಿ ಸೇವೆಯನ್ನು ಮುಂದುವರೆಸುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಯುಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರವನ್ನು ಹಾಗೂ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ಎಲ್.ನಂಜುಂಡಸ್ವಾಮಿ, ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರು ಇವರ ಸೇವೆಯನ್ನು ದಿನಾಂಕ: 01-04-2023 ರಿಂದ ಜಾರಿಗೆ ಬಂದಂತೆ ದಿನಾಂಕ: 31-03-2024 ರವರೆಗೆ ಮುಂದುವರೆಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2023/3.10** | ರೇಡಿಯೋ ಮಾನಸ ಸಮುದಾಯ ಬಾನುಲಿ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು Indian Institute of Astrophysics (IIA), Bengaluru ಇವರುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| **ತೀರ್ಮಾನ** | Indian Institute of Astrophysics (IIA), Bengaluru ಸಂಸ್ಥೆಯೊಡನೆ ರೇಡಿಯೋ ಮಾನಸ ಸಮುದಾಯ ಬಾನುಲಿ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು "ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ CONTENT ಗಳನ್ನು ಅಭಿವೃದ್ಧಿಪಡಿಸಲು Indian Institute of Astrophysics (IIA), Bengaluru ಸಂಸ್ಥೆಯ ಸಿಬ್ಬಂದಿಗಳಿಂದ ರೆಕಾರ್ಡಿಂಗ್ ಮಾಡಿಸಿ ಅವುಗಳನ್ನು ಕೇಂದ್ರದ ವತಿಯಿಂದ ಪ್ರಸಾರ ಮಾಡಲು ಮತ್ತು ಸದರಿ CONTENT ಗಳನ್ನು Indian Institute of Astrophysics (IIA), Bengaluru ಸಂಸ್ಥೆಯವರಿಗೆ ಒಂದು ಪ್ರತಿಯನ್ನು ನೀಡುವ" ಉದ್ದೇಶಕ್ಕಾಗಿ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2023/3.11** | ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು Liverpool School of Architecture, School of Arts, University of Liverpool, UK ಇವರುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| **ತೀರ್ಮಾನ** | Liverpool School of Architecture, School of Arts, University of Liverpool, UK ಸಂಸ್ಥೆಯೊಡನೆ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು Exchange of faculty and students, Collaborative research, Explore funding, Develop researcher training programmes, Capacity building and professional training programmes, Publish inter disciplinary research outputs organize exchange visits ಉದ್ದೇಶಕ್ಕಾಗಿ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| ಸಾಮಾನ್ಯ ಸಭೆ 2023/3.12 | ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ ಸಭೆಯ ನಡಾವಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ಕೋರುವ ಬಗೆಗೆ. |
| | ಸಿಂಡಿಕೇಟ್ ಸದಸ್ಯರಾದ ಪ್ರೊ. ಮುಜಾಫರ್ ಹೆಚ್ ಅಸ್ಸಾದಿಯವರು ಹಾಗೂ ಪಿ.ಎಂ.ಇ.ಬಿ ಸದಸ್ಯರಾದ ಡಾ. ಕೆ.ಮಹದೇವ್‌ರವರು ಸಲ್ಲಿಸಿರುವ ಪತ್ರ ಹಾಗೂ ಪ್ರಸ್ತಾಪಿಸಿದ ವಿಷಯಗಳು ಎರಡೂ ಒಂದೇ ಆಗಿದ್ದು, ಈ ವಿಷಯವಾಗಿ ಹಿಂದಿನ ಸಭೆಗಳಲ್ಲಿ ಚರ್ಚೆಯಾಗಿ, ಸರ್ಕಾರವು statute ಅನ್ನು ತಿರಸ್ಕರಿಸಿರುವುದರಿಂದ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ಕಾರ್ಯಕ್ರಮದಡಿಯಲ್ಲಿ ಯಾವುದೇ ಆರ್ಥಿಕ ದತ್ತಿಯನ್ನು ಸ್ಥಾಪಿಸಿರದ ಕಾರಣ ಸಭೆಯು ಈ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿತು. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 35(3)ರ ಪ್ರಕಾರ ದಿನಾಂಕ: 24-04-2023ರಂದು ನಡೆದ ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ ಸಭೆಯ ನಡವಳಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br>ಮುಂದುವರೆದು, ಅಂತಿಮವಾಗಿ ಸಭೆಯು ಈಗಾಗಲೇ Life Long Distinguished Professor ಆಗಿ ಆಹ್ವಾನಿಸಿರುವುದನ್ನು ಹಿಂಪಡೆಯಲು ಹಾಗೂ Life Long Distinguished Professor ಗಳು ಪ್ರಸ್ತುತ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದರೆ ಸದರಿ ಸಂಶೋಧನಾ ಕಾರ್ಯವು ಮುಗಿಯುವವರೆಗೆ ಅವರು ಮಾರ್ಗದರ್ಶಕರಾಗಿ ಮುಂದುವರೆಯುವುದಕ್ಕೆ ಅವಕಾಶ ಕಲ್ಪಿಸಲು, ಇಲ್ಲಿಯವರೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ Life Long Distinguished Professor ಆಗಿ ಸಲ್ಲಿಸಿದ ಸೇವೆಗೆ ಗೌರವವನ್ನು ಹಾಗೂ ಅಭಿನಂದನೆಗಳನ್ನು ಸಲ್ಲಿಸುತ್ತಾ, ಅವರ ಮುಂದಿನ ಜೀವನ ಸುಖಮಯವಾಗಿರಲೆಂದು ಮೈಸೂರು ವಿಶ್ವವಿದ್ಯಾನಿಲಯವು ಹಾರೈಸುತ್ತದೆ ಎಂದು ಪತ್ರ ಮುಖೇನ ತಿಳಿಸುವಂತೆ ಸಹ ತೀರ್ಮಾನಿಸಿತು. |
| ಸಾಮಾನ್ಯ ಸಭೆ 2023/3.13 | ಮೈಸೂರು ವಿಶ್ವವಿದ್ಯಾನಿಲಯದ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠಕ್ಕೆ ಪ್ರೊ. ಆರ್.ಇಂದಿರಾ ಅವರನ್ನು ದಿನಾಂಕ: 20-04-2023 ರಿಂದ ಮತ್ತೊಂದು ವರ್ಷಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಮುಂದುವರೆಸಲು ಹಾಗೂ ಇನ್ನಿಬ್ಬರು ತಜ್ಞರುಗಳಾದ Sri Ven.Manorakkhita ಮತ್ತು ಶ್ರೀ ಸಿ.ಬಸವಲಿಂಗಯ್ಯ ಅವರನ್ನು ವಿಭಾಗದ ಮಂಡಳಿ ಸಭೆಯಲ್ಲಿ ಶಿಫಾರಸ್ಸು ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2023/3.14 | ಶ್ರೀ ಕಪಿಲನ್ ಎ., ವಾಹನ ಚಾಲಕರು, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರು ಇಂಗ್ಲೆಂಡ್ ದೇಶಕ್ಕೆ ತೆರಳಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಶ್ರೀ ಕಪಿಲನ್ ಎ., ವಾಹನ ಚಾಲಕರು, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರು ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ದಿನಾಂಕ: 21-06-2023 ರಿಂದ 26-07-2023 ರವರೆಗೆ (ಒಟ್ಟು 36 ದಿವಸಗಳು) ಇಂಗ್ಲೆಂಡಿನ ಮ್ಯಾಂಚೆಸ್ಟರ್‌ಗೆ ಹೋಗಿ ಬರಲು ಹಾಗೂ ಕೇಂದ್ರ ಸ್ಥಾನವನ್ನು ಬಿಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| ಸಾಮಾನ್ಯ ಸಭೆ 2023/3.15 | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣ ಸಮಿತಿಯ ಶಿಫಾರಸ್ಸುಗಳು. |
| ತೀರ್ಮಾನ | ನವೆಂಬರ್ 2022 ರಂದು ನಡೆದ 2ನೇ ಸೆಮಿಸ್ಟರ್ ಸ್ನಾತಕೋತ್ತರ ಪದವಿಯ ಪರೀಕ್ಷೆಯಾದ Criminology & Forensic Science ವಿಷಯದ "Research Methodology and Statistical Methods (HC) ಎಂಬ ಪತ್ರಿಕೆಯಲ್ಲಿ ಮಹಾರಾಜ ಕಾಲೇಜಿನ 41 ವಿದ್ಯಾರ್ಥಿಗಳು ಒಂದೇ ರೀತಿಯ ಉತ್ತರಗಳನ್ನು ಬರೆದಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಸದಾಗಿ ಸಮಿತಿಯನ್ನು ರಚಿಸಿ, ಮುಖ್ಯ ಅಧೀಕ್ಷಕರು ಹಾಗೂ ಕೊಠಡಿ ಮೇಲ್ವಿಚಾರಕರನ್ನು ಕರೆಸಿ ವಿಚಾರಣೆ ನಡೆಸಿ ಲಿಖಿತ ಹೇಳಿಕೆಯನ್ನು ಪಡೆದು ವರದಿ ಸಲ್ಲಿಸುವಂತೆ ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| ಸಾಮಾನ್ಯ ಸಭೆ 2023/3.16 | ವಿಶ್ವವಿದ್ಯಾನಿಲಯದಲ್ಲಿನ ಬೋಧಕ ಸಿಬ್ಬಂದಿಗಳ ನೇಮಕಾತಿ ಕ್ರಮ ವಿಧಾನಗಳಿಗೆ ಸಂಬಂಧಿಸಿದಂತೆ ಪರಿನಿಯಮಾವಳಿಯನ್ನು ರಚಿಸಿರುವ ಬಗ್ಗೆ. |
| ತೀರ್ಮಾನ | ಸರ್ಕಾರವು ಸೂಚಿಸಿರುವಂತೆ ತಿದ್ದುಪಡಿ ಮಾಡಿ ಪರಿಷ್ಕರಿಸಲಾಗಿರುವ ವಿಶ್ವವಿದ್ಯಾನಿಲಯದಲ್ಲಿನ ಬೋಧಕ ಸಿಬ್ಬಂದಿಗಳ ನೇಮಕಾತಿ ಕ್ರಮ ವಿಧಾನಗಳಿಗೆ ಸಂಬಂಧಿಸಿದ ಪರಿನಿಯಮಾವಳಿಯನ್ನು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2023/3.17 | ಪ್ರೊ. ಬಿ. ಶಿವರಾಜ್, ನಿವೃತ್ತ ಪ್ರಾಧ್ಯಾಪಕರು, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಮೇಲಿನ ಆಪಾದನೆ ಸಂಬಂಧ ಕನಿಷ್ಠ ವೇತನ ಮಟ್ಟಕ್ಕೆ ಇಳಿಸಿರುವ ದಂಡನೆಯ ಸಿಂಡಿಕೇಟ್ ನಿರ್ಣಯವನ್ನು ರದ್ದುಗೊಳಿಸಿರುವ ಬಗ್ಗೆ. |
| ತೀರ್ಮಾನ | ಸರ್ಕಾರದ ಆದೇಶ ಸಂಖ್ಯೆ: ಇಡಿ 106 ಯುಎಂವಿ 2020, ಬೆಂಗಳೂರು, ದಿನಾಂಕ: 03-05-2023 ರನ್ವಯ ಪ್ರೊ. ಬಿ. ಶಿವರಾಜ್, ನಿವೃತ್ತ ಪ್ರಾಧ್ಯಾಪಕರು, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ವಿರುದ್ಧ ಶಿಸ್ತು ಕ್ರಮದ ಕುರಿತು ದಿನಾಂಕ: 19-01-2016 ರಂದು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ಕ್ರಮಾಂಕ 2016/1.4 ವಿಷಯದಲ್ಲಿ ತೆಗೆದುಕೊಂಡಿರುವ ತೀರ್ಮಾನ ಹಾಗೂ ತತ್ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದ ಆದೇಶಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಪ್ರಕರಣ 10(1) ರನ್ವಯ ರದ್ದುಗೊಳಿಸಿ ಹಾಗೂ ನಿಯಮಾನುಸಾರ ನೀಡಬೇಕಾದ ಆರ್ಥಿಕ ಸೌಲಭ್ಯಗಳನ್ನು ಇತ್ಯರ್ಥಪಡಿಸಲು ಸೂಚಿಸಿರುವುದನ್ನು ಗಮನಿಸಿದ ಸಿಂಡಿಕೇಟ್ ಸರ್ಕಾರದ ಆದೇಶದಂತೆ ಕ್ರಮ ವಹಿಸಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| ಸಾಮಾನ್ಯ ಸಭೆ 2023/3.18 | ಡಾ. ಆಯಿಷಾ ಎಂ. ಷರೀಫ್, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು UK ದೇಶಕ್ಕೆ ಭೇಟಿ ನೀಡಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಡಾ. ಆಯಿಷಾ ಎಂ. ಷರೀಫ್, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರಿಗೆ ಸೆಬ್ಬಾಟಿಕಲ್ ರಜಾ ಅವಧಿಯಲ್ಲಿ ಅವರು ನಿರ್ವಹಿಸುತ್ತಿರುವ ಕಾರ್ಯದ ಅಧ್ಯಯನ ಭಾಗವಾಗಿ ದಿನಾಂಕ: 01-08-2023 ರಿಂದ 31-01-2024 ರವರೆಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ರೀತಿಯ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ UK ದೇಶಕ್ಕೆ ತೆರಳಲು ಹಾಗೂ ಕೇಂದ್ರ ಸ್ಥಾನವನ್ನು ಬಿಡಲು ಸಭೆಯು ಅನುಮತಿಸಿತು. |

| | |
|---|---|
| **ಸಾಮಾನ್ಯ ಸಭೆ 2023/3.19** | ಶ್ರೀ ಮಂಜುನಾಥ್ ಎಸ್, ಪ್ರಥಮ ದರ್ಜೆ ಸಹಾಯಕರು, ಆಡಳಿತ ವಿಭಾಗ ಇವರು Thailand ದೇಶಕ್ಕೆ ಪ್ರವಾಸ ಕೈಗೊಳ್ಳಲು ಅನುಮತಿ ನೀಡಿರುವ ಬಗ್ಗೆ. |
| **ತೀರ್ಮಾನ** | ಶ್ರೀ ಮಂಜುನಾಥ್ ಎಸ್, ಪ್ರಥಮ ದರ್ಜೆ ಸಹಾಯಕರು, ಆಡಳಿತ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಖಾಸಗಿಯಾಗಿ ತಮ್ಮ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ದಿನಾಂಕ: 24-04-2023 ರಿಂದ 29-04-2023 ರವರೆಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ Thailand ದೇಶದ ಪ್ರವಾಸಕ್ಕೆ ಹೋಗಿಬರಲು ನೀಡಲಾಗಿರುವ ಅನುಮತಿಯನ್ನು ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2023/3.20** | Specialized Programme ಅಡಿಯಲ್ಲಿನ ಅಧ್ಯಯನ ಮಂಡಳಿಗಳ ರಚನೆ ಬಗ್ಗೆ-ಅನುಸಮರ್ಥನೆಗಾಗಿ. |
| **ತೀರ್ಮಾನ** | Excel Education Academy ಸಂಸ್ಥೆಗೆ PG Diploma in Education, Cauvery College of Life Science and Management ಸಂಸ್ಥೆಗೆ M.Sc (Reproductive Biology & Clinical Embryology-IVF) ಹಾಗೂ Marian Institute of Professional Studies, ಎಂ.ಐ.ಟಿ. ಕ್ಯಾಂಪಸ್, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ಸಂಸ್ಥೆಗೆ B.Sc.-Hons.(Artificial Intelligence and Machine Learning), BBA-Hons. (Hospital Administration) and Master of Hospital Administration ಕೋರ್ಸ್‌ಗಳ ಪಠ್ಯಕ್ರಮ ರಚನೆಗೆ ಅಧ್ಯಯನ ಮಂಡಳಿಗಳನ್ನು ರಚಿಸುವ ಸಂಬಂಧ ಮಾನ್ಯ ಕುಲಪತಿಯವರ ಆದೇಶಾನುಸಾರ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಅಧ್ಯಯನ ಮಂಡಳಿಗಳನ್ನು ರಚಿಸಿ, ಅಧಿಸೂಚನೆಯನ್ನು ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2023/3.21** | Central Institute of Petrochemicals Engineering and Technology (CIPET), ಮೈಸೂರು ಇವರು Specialized Programme ಅಡಿಯಲ್ಲಿ ಹೊಸದಾಗಿ M.Sc. (Polymer Science) ಕೋರ್ಸ್‌ನ್ನು ಪ್ರಾರಂಭಿಸಲು ಅನುಮತಿ ನೀಡಿರುವ ಸಂಬಂಧ ಅನುಮೋದನೆಯನ್ನು ಕೋರುವ ಬಗ್ಗೆ. |
| **ತೀರ್ಮಾನ** | ಪರಿವೀಕ್ಷಣಾ ಸಮಿತಿಯ ವರದಿಯನುಸಾರ ಮತ್ತು "The University of Mysore-Recognition of certain institutions for specified studies/specialized and Research Statutes 2008" ಅಧಿನಿಯಮದಲ್ಲಿರುವ ಅವಕಾಶದನುಸಾರ Central Institute of Petrochemicals Engineering and Technology (CIPET), ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೈಸೂರು ಸಂಸ್ಥೆಗೆ Specialized Programme ಅಡಿಯಲ್ಲಿ ಹೊಸದಾಗಿ M.Sc. (Polymer Science) ಕೋರ್ಸ್‌ಗೆ 40 (ನಲವತ್ತು) ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಯೊಂದಿಗೆ 2023-24ನೇ ಸಾಲಿನಿಂದ ಪ್ರಾರಂಭಿಸಲು ಸಿಂಡಿಕೇಟ್ ಸಭೆಯು ಅನುಮತಿಸಿತು. |
| **ಸಾಮಾನ್ಯ ಸಭೆ 2023/3.22** | ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿ ನಿಲಯ ಸಂಕೀರ್ಣ ನಿರ್ಮಾಣಕ್ಕಾಗಿ ವಿಶ್ವವಿದ್ಯಾನಿಲಯದ ಜಾಗವನ್ನು ತಾತ್ಕಾಲಿಕವಾಗಿ ನೀಡುವ ಬಗ್ಗೆ. |
| **ತೀರ್ಮಾನ** | ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು ಇವರಿಗೆ ಭೂಮಿಯನ್ನು ಹಸ್ತಾಂತರಿಸದ ಅಥವಾ ಭೋಗ್ಯಕ್ಕೆ ನೀಡದೇ ದೀನ ದಯಾಳ್ ವಸತಿ ನಿಲಯಗಳ ನಿರ್ಮಾಣಕ್ಕಾಗಿ ಈಗಾಗಲೇ ಗೊತ್ತುಪಡಿಸಲಾಗಿರುವ ಜಾಗವನ್ನು (ತಲಾ 2 ಎಕರೆಯಂತೆ ಪ್ರತ್ಯೇಕವಾಗಿ ಎನ್.ಎಸ್.ಎಸ್ ಭವನದ ಹಿಂಭಾಗ ಇಲ್ಲಿನ 2 ಎಕರೆ ಜಾಗವನ್ನು ಮಹಿಳಾ ಮತ್ತು ಗೌತಮ್, ಅಂಬೇಡ್ಕರ್ ಮತ್ತು ವಿಲೇಜ್ ಹಾಸ್ಟೆಲ್ ಹತ್ತಿರ 2 ಎಕರೆ ಉತ್ತರ ದಿಕ್ಕಿಗಿರುವ ಬೋಗಾದಿ |

| | |
|---|---|
| | ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಜಾಗದಲ್ಲಿ ಪುರುಷರ ವಿದ್ಯಾರ್ಥಿನಿಲಯಕ್ಕಾಗಿ) "ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯ" ಸಮುಚ್ಚಯವನ್ನು ನಿರ್ಮಿಸುವ ಸಂಬಂಧ ಸರ್ಕಾರದ ನಿರ್ದೇಶನದಂತೆ ಅನುಮತಿ ನೀಡಲು ತೀರ್ಮಾನಿಸಲಾಯಿತು.<br><br>* ವಿಶ್ವವಿದ್ಯಾನಿಲಯಕ್ಕೆ ಉನ್ನತ ಶಿಕ್ಷಣ ಬಯಸಿ ಬರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ, ಅಲ್ಪಸಂಖ್ಯಾತ ಮತ್ತು ಇತರೆ ವರ್ಗದ ವಿದ್ಯಾರ್ಥಿಗಳಿಗಾಗಿ 60:40 ಅನುಪಾತದಲ್ಲಿ ನೀಡುವ ಹಾಗೂ ಪ್ರಥಮ ಆದ್ಯತೆಯಲ್ಲಿ ವಿಶ್ವವಿದ್ಯಾನಿಲಯದ ನೇರ ಆಡಳಿತಕ್ಕೆ ಒಳಪಟ್ಟ ವಿದ್ಯಾರ್ಥಿಗಳಿಗೆ ಈ ಸೌಕರ್ಯವನ್ನು ಒದಗಿಸಲು ಹಾಗೂ<br>* ಕಟ್ಟಡ ನಿರ್ಮಾಣ ಆದ ನಂತರ ಈ "ದೀನ್‌ದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯ"ದ ಸಮುಚ್ಚಯವನ್ನು ನಿರ್ವಹಣೆ ಮಾಡುವ ಮತ್ತು ಮಾಲೀಕತ್ವದ ಹೊಣೆಗಾರಿಕೆಯ ಸಂಬಂಧ ತೆಗೆದುಕೊಳ್ಳಬಹುದಾದ ಕ್ರಮದ ಕುರಿತು ಸರ್ಕಾರಕ್ಕೆ ಪತ್ರ ಬರೆಯಲು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2023/3.23** | ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಸಭಾಂಗಣ, ಮೈದಾನ ಹಾಗೂ ಇತರೆ ಜಾಗಗಳ ನಿರ್ವಹಣಾ ಶುಲ್ಕ ಹಾಗೂ ಠೇವಣಿ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ. |
| | ಪ್ರೊ. ಮುಜಾಫರ್ ಹೆಚ್ ಅಸ್ಸಾದಿ ಅವರು ಮಾತನಾಡಿ, ಗಾಂಧಿ ಭವನದ ಶುಲ್ಕವನ್ನು ಹೆಚ್ಚು ಮಾಡಬಾರದು. ವಾಣಿಜ್ಯ ಉದ್ದೇಶಗಳಿಗೆ ಉಪಯೋಗಿಸುವ ಭವನಗಳಿಗೆ ಶುಲ್ಕ ಹೆಚ್ಚು ಮಾಡಿ, ಉಳಿದ ಭವನಗಳಿಗೆ ಶುಲ್ಕ ಜಾಸ್ತಿ ಮಾಡಬಾರದೆಂದು ತಿಳಿಸಿದರು.<br><br>ಡಾ. ಚೈತ್ರ ನಾರಾಯಣ ಅವರು ಮಾತನಾಡಿ, ಕನ್ನಡ ಸಿನಿಮಾಗಳಿಗೆ ರಿಯಾಯಿತಿ ಶುಲ್ಕ,ವನ್ನು ನೀಡಿ, ಉಳಿದ ಭಾಷೆಗಳ ಸಿನಿಮಾಗಳಿಗೆ 30% ಶುಲ್ಕ ಹೆಚ್ಚು ಮಾಡಬೇಕೆಂದು ತಿಳಿಸಿದರು. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಸಭಾಂಗಣ, ಮೈದಾನ ಹಾಗೂ ಇತರೆ ಜಾಗಗಳ ನಿರ್ವಹಣಾ ಶುಲ್ಕ ಹಾಗೂ ಠೇವಣಿ ಶುಲ್ಕವನ್ನು ಪರಿಷ್ಕರಿಸಿರುವುದನ್ನು ಗಮನಿಸಿದ ಸಿಂಡಿಕೇಟ್ ಒಟ್ಟಾರೆಯಾಗಿ ಶೇ.30 ರಷ್ಟು ಹೆಚ್ಚಿಸಲು ಹಾಗೂ ಸದಸ್ಯರುಗಳು ನೀಡಿರುವ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಅಗತ್ಯವಿರುವ ಕಡೆ ಮತ್ತೊಮ್ಮೆ ಪರಿಶೀಲಿಸಿ ಪರಿಷ್ಕರಿಸಲು ಸಿಂಡಿಕೇಟ್ ಅನುಮೋದಿಸಿತು. |
| **ಸಾಮಾನ್ಯ ಸಭೆ 2023/3.24** | ಡಾ. ಹೆಚ್.ಎಸ್.ಜಯಂತ್, ಪ್ರಾಧ್ಯಾಪಕರು, ಸೂಕ್ಷ್ಮಜೀವವಿಜ್ಞಾನ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಆಕ್ಸ್‌ಫರ್ಡ್ ಯುನೈಟೆಡ್ ಕಿಂಗ್‌ಡಮ್ ದೇಶಕ್ಕೆ ಹೋಗಿಬರಲು ಅನುಮತಿ ನೀಡಿದ್ದ ಬಗ್ಗೆ ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ. |
| **ತೀರ್ಮಾನ** | ಡಾ. ಹೆಚ್.ಎಸ್. ಜಯಂತ್, ಪ್ರಾಧ್ಯಾಪಕರು, ಸೂಕ್ಷ್ಮಜೀವವಿಜ್ಞಾನ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಆಕ್ಸ್‌ಫರ್ಡ್ ಯುನೈಟೆಡ್ ಕಿಂಗ್‌ಡಮ್ ದೇಶಕ್ಕೆ ಹೋಗಿಬರಲು ಅವರ ಹಕ್ಕಿನಲ್ಲಿರುವ ಗಳಿಕೆ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ದಿನಾಂಕ 19-05-2023 ರಿಂದ 12-06-2023ರವರೆಗೆ ಹೋಗಿ ಬರಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2023/3.25** | ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್‌ನ ನಿರ್ದೇಶಕರ ನೇಮಕಾತಿಯ ಬಗೆಗೆ. |
| **ತೀರ್ಮಾನ** | ಪ್ರೊ. ಬಿ.ಶಂಕರ್, ನಿರ್ದೇಶಕರು, ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರ ಕೋರಿಕೆಯಂತೆ ನಿರ್ದೇಶಕರ ಅವಧಿಯು ದಿನಾಂಕ 19-3-2023ಕ್ಕೆ ಪೂರ್ಣಗೊಂಡಿದ್ದು, ಅವರು ದಿನಾಂಕ 31-07-2023 ರಂದು ವಯೋನಿವೃತ್ತಿ ಹೊಂದಲಿರುವುದರಿಂದ, ಪ್ರೊ. ಬಿ.ಶಂಕರ್ ಅವರನ್ನು ದಿನಾಂಕ 31-07-2023 ರವರೆಗೆ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ನಿರ್ದೇಶಕರನ್ನಾಗಿ ಮುಂದುವರೆಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| ಸಾಮಾನ್ಯ ಸಭೆ 2023/3.26 | ಡಾ. ಪುಟ್ಟಸ್ವಾಮಿ, ಪ್ರಾಧ್ಯಾಪಕರು, ಕನ್ನಡ ವಿಭಾಗ, ಹೇಮಗಂಗೋತ್ರಿ, ಸ್ನಾತಕೋತ್ತರ ಕೇಂದ್ರ, ಹಾಸನ ಇವರನ್ನು ಹಾಸನ ವಿಶ್ವವಿದ್ಯಾನಿಲಯದ ಕುಲಸಚಿವ (ಆಡಳಿತ) ಹುದ್ದೆಗೆ ಪ್ರಭಾರ ಆಗಿ ನೇಮಿಸಿರುವ ಬಗ್ಗೆ. |
| ತೀರ್ಮಾನ | ಡಾ. ಪುಟ್ಟಸ್ವಾಮಿ, ಪ್ರಾಧ್ಯಾಪಕರು, ಕನ್ನಡ ವಿಭಾಗ, ಹೇಮಗಂಗೋತ್ರಿ, ಸ್ನಾತಕೋತ್ತರ ಕೇಂದ್ರ, ಹಾಸನ ಇವರನ್ನು ಹಾಸನ ವಿಶ್ವವಿದ್ಯಾನಿಲಯದ ಕುಲಸಚಿವ (ಆಡಳಿತ) ಹುದ್ದೆಗೆ ಪ್ರಭಾರ ಆಗಿ ಕಾರ್ಯನಿರ್ವಹಿಸಲು ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ನೇಮಕ ಮಾಡಿ ದಿನಾಂಕ 28-03-2023 ರಂದು ಅಧಿಸೂಚನೆ ಹೊರಡಿಸಿರುತ್ತಾರೆ. ಈ ಸಂಬಂಧ ದಿನಾಂಕ: 29-03-2023 ರಂದು ಡಾ. ಪುಟ್ಟಸ್ವಾಮಿ ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಹುದ್ದೆಯ ಸೇವೆಯಿಂದ ಬಿಡುಗಡೆಗೊಳಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2023/3.27 | ಡಾ. ಗಂಗಾಧರ್.ಎಂ.ಆರ್., ಪ್ರಾಧ್ಯಾಪಕರು, ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆಗೆ ನೇಮಕಗೊಂಡಿರುವ ಬಗ್ಗೆ. |
| ತೀರ್ಮಾನ | ಡಾ. ಗಂಗಾಧರ್.ಎಂ.ಆರ್., ಪ್ರಾಧ್ಯಾಪಕರು, ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಚಾಮರಾಜನಗರ ವಿಶ್ವವಿದ್ಯಾನಿಲಯ, ಚಾಮರಾಜನಗರ ಇಲ್ಲಿಗೆ ಕುಲಪತಿಯಾಗಿ ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ನೇಮಕ ಮಾಡಿ ದಿನಾಂಕ 20.03.2023 ರಂದು ಅಧಿಸೂಚನೆ ಹೊರಡಿಸಿರುತ್ತಾರೆ. ಈ ಸಂಬಂಧ ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ ಇಟಿ7(13)/403/2012-13 ದಿನಾಂಕ 21-03-2023 ರಂದು ಡಾ. ಗಂಗಾಧರ್.ಎಂ.ಆರ್ ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಹುದ್ದೆಯ ಸೇವೆಯಿಂದ ಬಿಡುಗಡೆಗೊಳಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2023/3.28 | ಡಾ. ಶುಭಾ ಗೋಪಾಲ್, ಪ್ರಾಧ್ಯಾಪಕರು, ಸೂಕ್ಷ್ಮಜೀವವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಜರ್ಮನಿ ದೇಶಕ್ಕೆ ಹೋಗಿಬರಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಡಾ. ಶುಭಾ ಗೋಪಾಲ್, ಪ್ರಾಧ್ಯಾಪಕರು, ಸೂಕ್ಷ್ಮಜೀವವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ 17-04-2023 ರಿಂದ 03-05-2023 ರವರೆಗೆ ಸ್ವಂತ ಕೆಲಸದ ನಿಮಿತ್ತ ಜರ್ಮನಿ ದೇಶಕ್ಕೆ ಅವರ ಹಕ್ಕಿನಲ್ಲಿರುವ ಅರ್ಧ ವೇತನ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಹೋಗಿ ಬಂದಿರುವುದಕ್ಕೆ ಹೊರಡಿಸಲಾಗಿರುವ ಘಟನೋತ್ತರ ಮಂಜೂರಾತಿ ಅನುಮತಿಯನ್ನು ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿತು. |
| ಸಾಮಾನ್ಯ ಸಭೆ 2023/3.29 | 2022-23ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ವಿಷಯಗಳ ಹೆಚ್ಚುವರಿ ಬೋಧನಾ ಕಾರ್ಯಭಾರಕ್ಕೆ ಆಹ್ವಾನಿಸಲು ನೇರ ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ಅತಿಥಿ ಉಪನ್ಯಾಸಕರುಗಳಾಗಿ ಆಹ್ವಾನಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಪ್ರಸ್ತುತ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳಲ್ಲಿರುವ ಕಾರ್ಯಭಾರ (workload)ವನ್ನು ಗುರುತಿಸಲು ಪ್ರೊ. ಎಂ.ಎ.ಶ್ರೀಧರ್, ಭೌತವಿಜ್ಞಾನ ಪ್ರಾಧ್ಯಾಪಕರು ಮತ್ತು ಪ್ರೊ. ಅಜಯ್ ಕುಮಾರ್.ಕೆ, ರಸಾಯನಶಾಸ್ತ್ರ ವಿಭಾಗ, ಯುವರಾಜ ಕಾಲೇಜು ಇವರ ಅಧ್ಯಕ್ಷತೆಯಲ್ಲಿ ಪ್ರತ್ಯೇಕವಾಗಿ ಎರಡು ಸಮಿತಿಗಳನ್ನು ರಚಿಸಿ, ಸಮಿತಿಯು ಸಲ್ಲಿಸುವ ವರದಿಯ ಆಧಾರದ ಮೇಲೆ ಅತಿಥಿ ಉಪನ್ಯಾಸಕರುಗಳನ್ನು ನೇಮಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.<br>ಮಾನ್ಯ ಸದಸ್ಯರಾದ ಶ್ರೀ ಎಂ.ಬಿ.ಗಪ್ಪಣ್ಣ ಅವರು ಮಾತನಾಡಿ, ತ್ವರಿತವಾಗಿ ಸಮಿತಿ |

| | |
|---|---|
| | ವರದಿಯನ್ವಯ ಕ್ರಮ ತೆಗೆದುಕೊಳ್ಳಲು ತಮ್ಮ ಅಭ್ಯಂತರವಿಲ್ಲವೆಂದು, ಆದರೆ ವಿಳಂಬಕ್ಕೆ ಮತ್ತಷ್ಟು ಅವಕಾಶ ನೀಡಬಾರದೆಂದರು.<br><br>ಪ್ರೊ. ಮುಜಾಫರ್ ಹೆಚ್ ಅಸ್ಸಾದಿಯವರು ಮಾತನಾಡಿ, ಯಾವ್ಯಾವ ವಿಭಾಗದವರು ಸರಿಯಾದ ರೀತಿಯಲ್ಲಿ ಕಾರ್ಯಭಾರ ನೀಡಿರುವರೋ ಅಂತಹ ವಿಭಾಗಗಳಿಗೆ ಕೂಡಲೇ ಅತಿಥಿ ಉಪನ್ಯಾಸಕರುಗಳನ್ನು ನೇಮಿಸಬೇಕೆಂದರು. ಅಷ್ಟೇ ಅಲ್ಲದೆ ತಾವು ಪ್ರಭಾರ ಕುಲಪತಿಗಳಾಗಿದ್ದಾಗ ಅತಿಥಿ ಉಪನ್ಯಾಸಕರುಗಳನ್ನು ನೇರ ಸಂದರ್ಶನವನ್ನು ಏರ್ಪಡಿಸಿ, ಅರ್ಹತೆಯ ಆಧಾರದಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ ಮತ್ತು ರೋಷ್ಟರ್‌ನ್ನು ಸಹ ಗಮನದಲ್ಲಿಟ್ಟುಕೊಂಡು ಸಾಧ್ಯವಾದಷ್ಟು ಮಟ್ಟಿಗೆ ಅರ್ಹರನ್ನು ಆಯ್ಕೆ ಮಾಡಿ, ಸಾಮಾಜಿಕ ನ್ಯಾಯವನ್ನು ಕಲ್ಪಿಸಲಾಗಿದೆ.<br><br>ಮಾನ್ಯ ಕುಲಸಚಿವರು ಮಾತನಾಡಿ, ಈಗಾಗಲೇ ಹಾಸನ, ಮಂಡ್ಯ ಮತ್ತು ಚಾಮರಾಜನಗರ ಸ್ನಾತಕೋತ್ತರ ಕೇಂದ್ರಗಳನ್ನು ಪ್ರತ್ಯೇಕಿಸಿ ಸರ್ಕಾರದ ಅಧಿಸೂಚನೆ ಮೇರೆಗೆ ಪ್ರಥಮ ಹಂತದಲ್ಲಿ ಕುಲಪತಿಗಳನ್ನು ನೇಮಕ ಮಾಡಲಾಗಿದೆ. ಈಗಾಗಲೇ ಚಾಮರಾಜನಗರ ವಿಶ್ವವಿದ್ಯಾನಿಲಯದಲ್ಲಿ ಎಂ.ಬಿ.ಎ ಮತ್ತು ಸಮಾಜಶಾಸ್ತ್ರ ಸ್ನಾತಕೋತ್ತರ ಕೋರ್ಸುಗಳಿದ್ದು, ಸಮಾಜಶಾಸ್ತ್ರ ವಿಭಾಗದಲ್ಲಿ ಕೇವಲ 05 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರಿಂದ, ಈ ವಿದ್ಯಾರ್ಥಿಗಳನ್ನು ಮಾನಸಗಂಗೋತ್ರಿಗೆ ವರ್ಗಾಯಿಸಿ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲಾಗಿದೆ. ಆದರೆ ಎಂ.ಬಿ.ಎ ವಿಭಾಗದಲ್ಲಿ 60 ವಿದ್ಯಾರ್ಥಿಗಳ ಒಂದು ತರಗತಿಯಿದ್ದು, ಈ ವಿದ್ಯಾರ್ಥಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯ ಪ್ರವೇಶಾತಿ ನೀಡಿ ಸುಮಾರು ರೂ.24.00 ಲಕ್ಷಗಳನ್ನು ಶುಲ್ಕದ ರೂಪದಲ್ಲಿ ಸಂಗ್ರಹಿಸಿರುವುದರಿಂದ ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ಧಕ್ಕೆಯಾಗದಂತೆ ಅತಿಥಿ ಉಪನ್ಯಾಸಕರುಗಳನ್ನು ನೇಮಿಸಿ ಶೈಕ್ಷಣಿಕ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸುವುದು ಮಾತ್ರ ವಿಶ್ವವಿದ್ಯಾನಿಲಯಕ್ಕೆ ಸೇರಿರುತ್ತದೆಂದು ಸಭೆಗೆ ಮಾಹಿತಿ ನೀಡಿದರು. ಹೀಗಾಗಿ ತುಂಬಾ ಅವಶ್ಯವಾಗಿ ಚಾಮರಾಜನಗರದ ಎಂ.ಬಿ.ಎ ಮತ್ತು ಮಾನಸಗಂಗೋತ್ರಿಯಲ್ಲಿನ ಯೋಗ ವಿಜ್ಞಾನ, ಆಹಾರ ವಿಜ್ಞಾನ ಮತ್ತು ಪೋಷಣಾ ವಿಭಾಗಗಳಿಗೆ ಅತಿಥಿ ಉಪನ್ಯಾಸಕರುಗಳನ್ನು ಅಗತ್ಯವಿರುವೆಡೆ ತುರ್ತಾಗಿ ನೇಮಿಸಿಕೊಳ್ಳಬೇಕಾಗಿದೆ ಎಂದು ತಿಳಿಸಿದರು. |
| **ತೀರ್ಮಾನ** | 2022-23ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ವಿಷಯಗಳ ಹೆಚ್ಚುವರಿ ಬೋಧನಾ ಕಾರ್ಯಭಾರಕ್ಕೆ ನೇರ ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ವಿಭಾಗಗಳಲ್ಲಿರುವ ಕಾರ್ಯಭಾರದ ಒತ್ತಡಕ್ಕನುಗುಣವಾಗಿ ಅಗತ್ಯವಿರುವೆಡೆ ಅತಿಥಿ ಉಪನ್ಯಾಸಕರುಗಳನ್ನು ಜರೂರಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು |
| **ಸಾಮಾನ್ಯ ಸಭೆ 2023/3.30** | 2023-24ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ನಿವೃತ್ತಿ ಹೊಂದುವ ನೌಕರರಿಗೆ ಪಿಂಚಣಿ ಸೌಲಭ್ಯಗಳು ಹಾಗೂ ಪಿಂಚಣಿ/ಕುಟುಂಬ ಪಿಂಚಣಿಗಳ ಪಾವತಿಗೆ ಕೊರತೆ ಇರುವುದರಿಂದ ಪಿಂಚಣಿ "CORPUS FUND"ನಿಂದ ಹಣ ಹಿಂಪಡೆಯುವ ಸಂಬಂಧ. |
| **ತೀರ್ಮಾನ** | 2023-24ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ನಿವೃತ್ತಿ ಹೊಂದುವ ನೌಕರರಿಗೆ ಪಿಂಚಣಿ ಸೌಲಭ್ಯಗಳು ಹಾಗೂ ಪಿಂಚಣಿ/ಕುಟುಂಬ ಪಿಂಚಣಿಗಳ ಪಾವತಿಗೆ ಕೊರತೆ ಇರುವುದರಿಂದ ಪಿಂಚಣಿ "CORPUS FUND" – "New Group Superannuation Cash Accumulation Benefit Scheme"ನಲ್ಲಿ ಠೇವಣಿ ಇಟ್ಟಿರುವ ಹಣದಿಂದ 12 ಕಂತುಗಳಲ್ಲಿ ಹಿಂಪಡೆದು ಪಿಂಚಣಿ ಪಾವತಿಸಲು ಹಾಗೂ ಸರ್ಕಾರದಿಂದ ಅನುದಾನ ಬಂದ ನಂತರ ಮರುಹೂಡಿಕೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

**ಸಾಮಾನ್ಯ ಸಭೆ 2023/3.31**

ಮೈಸೂರು ವಿಶ್ವವಿದ್ಯಾನಿಲಯದ ಮಾರ್ಚ್-2022 ಮತ್ತು 2023-24ನೇ ಸಾಲಿನಲ್ಲಿ ಆಯವ್ಯಯ ಅಂದಾಜಿನಲ್ಲಿ ಜಿ.ಆರ್.ಎ. (135/136), ಐ.ಡಿ.ಎಫ್. ಹಾಗೂ ಸಹೋದ್ಯಮ ಕೋರ್ಸ್ ಖಾತೆಗಳಿಂದ ಹುಂಡಿಗಳನ್ನು ಪಾವತಿಸಿರುವ ಹಾಗೂ ಪಾವತಿಸಬೇಕಾಗಿರುವ ಬಗ್ಗೆ.

**ತೀರ್ಮಾನ**

ಮೈಸೂರು ವಿಶ್ವವಿದ್ಯಾನಿಲಯದ ಮಾರ್ಚ್-2022 ಮತ್ತು 2023-24ನೇ ಸಾಲಿನಲ್ಲಿ ಆಯವ್ಯಯ ಅಂದಾಜಿನಲ್ಲಿ ಕಾಮಗಾರಿ ಹಾಗೂ ಇತರೆ ಹುಂಡಿಗಳನ್ನು ಜಿ.ಆರ್.ಎ. (135/136) ಈ ಕೆಳಕಂಡಂತೆ ವೆಚ್ಚವಾಗಿರುವ ಮೊತ್ತಗಳನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.

| Sl No. | Name of the Account | Account No. | Amount (Rs.) |
|---|---|---|---|
| 01 | GRA (Minor Work Bills 135/136 (Annexure-1.1) | 54007591471 | 432891.00 |
| 02 | Infrastructure Development Fund (Annexure-1.2) | 54007591324 | 2505187.00 |
| 03 | Collaboration Course (Annexure-1.3) | 54007592690 | 41865150.00 |
| | | Total Rs. | 44803228.00 |

ಪ್ರಸ್ತುತ ಕಾಮಗಾರಿ/ಇತರೆ ಹುಂಡಿಗಳನ್ನು ಪಾವತಿಸುವ ಸಂಬಂಧ ಐ.ಡಿ.ಎಫ್. ಹಾಗೂ ಸಹೋದ್ಯಮ ಕೋರ್ಸ್ ಖಾತೆಗಳಿಂದ ಪಾವತಿಗಾಗಿ ವಿವಿಧ ಕೇಂದ್ರಗಳಿಂದ ಕಾಮಗಾರಿ/ಇತರೆ ಹುಂಡಿಗಳನ್ನು ಸಲ್ಲಿಸಿರುವ ವಿವರಗಳು ಈ ಕೆಳಕಂಡಂತಿದ್ದು, ಸದರಿ ಖಾತೆಗಳಿಗೆ ಅನುದಾನ ಲಭ್ಯವಾದ ನಂತರ ಬಾಕಿ ಹುಂಡಿಗಳನ್ನು ಪಾವತಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.

| Sl No. | Name of the Account | Account No. | Amount (Rs.) |
|---|---|---|---|
| 01 | Infrastructure Development Fund (Annexure-2.1) | 54007591324 | 78141.00 |
| 02 | Collaboration Course (Annexure-2.2) | 54007592690 | 43953449.00 |
| | | Total Rs. | 44737590.00 |

**ಸಾಮಾನ್ಯ ಸಭೆ 2023/3.32**

ಶ್ರೀ ಗಪ್ಪಣ್ಣ ಎಂ.ಬಿ., ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲು ಕೋರಿರುವ ಬಗ್ಗೆ.

ಶ್ರೀ ಗಪ್ಪಣ್ಣ ಎಂ.ಬಿ., ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ವಿಶ್ವವಿದ್ಯಾನಿಲಯದಲ್ಲಿ ಮಾರಾಟಗಾರರು ಮತ್ತು ಗುತ್ತಿಗೆದಾರರಿಗೆ ಪಾವತಿಗೆ ಬಾಕಿಯಿರುವ ಹುಂಡಿಯ ವಿವರ ಹಾಗೂ ಅದರ ಮೊತ್ತದ ವಿವರವನ್ನು ಈ ಕೆಳಕಂಡಂತಿದ್ದು, ಈ ವಿವರಗಳನ್ನು ಸಿಂಡಿಕೇಟ್ ಸಭೆಯು ಗಮನಿಸಿತು.

| ಕ್ರ.ಸಂ | ವಿಭಾಗಗಳು | ಮೊತ್ತ ರೂ |
|---|---|---|
| 1 | ಹಣಕಾಸು ವಿಭಾಗ | 4,47,37,590-00 |
| 2 | ಕುಲಸಚಿವ (ಪರೀಕ್ಷಾಂಗ) ವಿಭಾಗ | 3,35,72,941-00 |
| 3 | ಕಾರ್ಯಪಾಲಕ ಅಭಿಯಂತರರ ವಿಭಾಗ | 15.72.31.757-00 |
| 4 | ಐ.ಸಿ.ಡಿ., ಗಣಕ ವಿಜ್ಞಾನ ಅಧ್ಯಯನ ಕೇಂದ್ರ | 2,63,38,037-00 |
| 5 | ಸಾಮರ್ಥ್ಯಾಭಿವೃದ್ಧಿ ಮತ್ತು ಉದ್ಯೋಗಾವಕಾಶಗಳ ಸೇವಾ ಕೇಂದ್ರ | 87,11,800-00 |
| | ಒಟ್ಟು ರೂ. | 27,05,92,125-00 |

## ಇತರೆ ವಿಷಯಗಳು:

1. ಡಾ. ಚೈತ್ರನಾರಾಯಣರವರು ಮಾತನಾಡಿ, ಸೆಕ್ಯೂರಿಟಿ ಕೆಲಸ ನಿರ್ವಹಿಸುತ್ತಿರುವವರಿಗೆ ವೇತನ ಪಾವತಿ ವಿಳಂಬವಾಗುತ್ತಿದ್ದು ಹಾಗೂ ವೇತನ ಕೂಡ ಕಡಿಮೆ ಇರುತ್ತದೆ ಎಂದು ಸಾಕಷ್ಟು ಭಾರಿ ನನ್ನಲ್ಲಿ ಸೆಕ್ಯೂರಿಟಿ ಕಾರ್ಯನಿರ್ವಹಿಸುತ್ತಿರುವವರು ಪ್ರಸ್ತಾಪಿಸಿರುತ್ತಾರೆ. ಕೂಡಲೇ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿ ತಿಳಿಸಿದರು. ಇದಕ್ಕುತ್ತರವಾಗಿ ಮಾನ್ಯ ಕುಲಸಚಿವರು ಇದರ ಬಗ್ಗೆ ಜಿಲ್ಲಾ ಕಾರ್ಮಿಕ ಅಧಿಕಾರಿಗಳಲ್ಲಿಯೂ ಕೂಡ ಚರ್ಚಿಸಿರುತ್ತೇವೆ. ವಿಶ್ವವಿದ್ಯಾನಿಲಯವು ಟೆಂಡರ್ ನೀಡಿರುವ ಏಜೆನ್ಸಿರವರ ಖಾತೆಗೆ ಪ್ರತಿ ತಿಂಗಳು ವೇತನ ಪಾವತಿ ಮಾಡಲಾಗುತ್ತಿದ್ದು, ಟೆಂಡರ್‌ದಾರರು ಸೆಕ್ಯೂರಿಟಿ ಕೆಲಸ ನಿರ್ವಹಿಸುತ್ತಿರುವವರಿಗೆ ಪಾವತಿಸಬೇಕಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

2. ಡಾ. ಚೈತ್ರನಾರಾಯಣರವರು ಮಾತನಾಡಿ, ಐ.ಓ.ಇ.ಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೆ ವೇತನ ಪಾವತಿಯಾಗಿರುತ್ತದೆ ಆದರೆ ಟೆಕ್ನಿಷಿಯನ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಕಿರಣ್‌ಕುಮಾರ್ ಹಾಗೂ ಷಣ್ಮುಖಪ್ರಿಯಾರವರ ವೇತನ ಪಾವತಿಯಾಗಿರುವುದಿಲ್ಲ, ಇದರ ಕುರಿತಾಗಿ ಕಳೆದ ಸಭೆಯಲ್ಲಿಯೂ ಸಹ ಚರ್ಚಿಸಿರುತ್ತೇನೆ ಎಂದು ತಿಳಿಸಿದರು. ಮಾನ್ಯ ಕುಲಪತಿಗಳು ಮಾತನಾಡಿ, ಐ.ಓ.ಇ.ಯಲ್ಲಿ ಟೆಕ್ನಿಷಿಯನ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಕಿರಣ್‌ಕುಮಾರ್ ಹಾಗೂ ಷಣ್ಮುಖಪ್ರಿಯಾರವರ ವೇತನ ಹೆಚ್ಚಾಗಿರುತ್ತದೆ ಇತರೆ ಸಿಬ್ಬಂದಿಗೆ ಹೋಲಿಸಿದರೆ, ಐ.ಓ.ಇ ಸ್ಥಾಪನೆಯಾದ ಪ್ರಾರಂಭದಿಂದಲೂ ಐಓಇ ಸಂಪನ್ಮೂಲಗಳಿಂದ ವೇತನ ಪಾವತಿಯಾಗುತ್ತಿತ್ತು. ಆದರೆ ಈಗ ಐಓಇಯಲ್ಲಿ ಸಂಪನ್ಮೂಲಗಳ ಕೊರತೆಯಿಂದ ಅವರಿಗೆ ವೇತನ ಪಾವತಿಯಾಗಿರುವುದಿಲ್ಲ ಇದರ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

3. ವಿಶ್ವವಿದ್ಯಾನಿಲಯದಿಂದ ಯಾವುದೇ ಆದೇಶ ಬಂದರೂ ವಿಶ್ವವಿದ್ಯಾನಿಲಯದ ಸಿಬ್ಬಂದಿಗಳು ಆದೇಶವನ್ನು ಪಾಲಿಸಬೇಕು, ಪಾಲಿಸದೇ ಇರುವವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕೆಂದು ಸಭೆಯು ಆಗ್ರಹಿಸಿತು.

4. ಡಾ. ಚೈತ್ರನಾರಾಯಣರವರು ಮಾತನಾಡಿ, ಕೆಲವೊಂದು ವಿಭಾಗದ ಅಧ್ಯಕ್ಷರು/ಪ್ರಾಧ್ಯಾಪಕರು ವಿಭಾಗದಲ್ಲಿ ತರಗತಿಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ವಿದ್ಯಾರ್ಥಿಗಳು ದೂರು ನೀಡಿರುತ್ತಾರೆ. ಇದರ ಛಾಯಾಚಿತ್ರ ಕೂಡ ನನ್ನಲ್ಲಿ ಇದೆ ಎಂದು ತಿಳಿಸಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ, ಸಾಕಷ್ಟು ಭಾರಿ ನಮಗೂ ಕೂಡ ದೂರು ಬಂದಿರುತ್ತದೆ ಇದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

5. ಶ್ರೀ ಎಂ.ಬಿ. ಗಪಣ್ಣರವರು ಮಾತನಾಡಿ, ಓಆರ್‌ಐನ ಹಸ್ತಪ್ರತಿಗಳನ್ನು ಓದಲು ಒಬ್ಬರನ್ನು ನೇಮಿಸಿಕೊಳ್ಳುವುದಕ್ಕೆ ಅಲ್ಲಿನ ನಿರ್ದೇಶಕರು ತಿಳಿಸಿರುತ್ತಾರೆ ಎಂದರು. ಇದಕ್ಕುತ್ತರವಾಗಿ ಕುಲಸಚಿವರು ಮಾತನಾಡಿ, ಹಸ್ತಪ್ರತಿಗಳನ್ನು ಓದುವಂತವರನ್ನು ನೇಮಿಸಿಕೊಳ್ಳಲು ಉಚಿತವಾಗಿ ನೀಡಿದರೆ, ತಾತ್ಕಾಲಿಕವಾಗಿ ನೇಮಕ ಮಾಡುವುದಾಗಿ ತಿಳಿಸಿದರು. ಇದಕ್ಕೆ ಸಮಿತಿಯು ಒಪ್ಪಿಗೆಯನ್ನು ಸೂಚಿಸಿತು.

6. ಪ್ರೊ. ಮುಜಾಫರ್ ಹೆಚ್ ಅಸ್ಸಾದಿರವರು ಮಾತನಾಡಿ, ಸಿಎಎಸ್‌ಗೆ ಸಂಬಂಧಿಸಿದ ಅರ್ಜಿ ನಮೂನೆಯಲ್ಲಿ ಆದಷ್ಟು ಕಡಿಮೆ ವಿಷಯವನ್ನು ನಮೂದು ಮಾಡುವಂತೆ ಮನವಿ ಮಾಡಿದರು. ಇದಕ್ಕುತ್ತರವಾಗಿ ಕುಲಸಚಿವರು ಸಿಎಎಸ್ ಅರ್ಜಿ ನಮೂನೆ ತಯಾರಿಸುವಾಗ ಇತರೆ ವಿಶ್ವವಿದ್ಯಾನಿಲಯದ ಅರ್ಜಿ ನಮೂನೆ ಹಾಗೂ ತಮ್ಮ ಸಲಹೆಯನ್ನು ಸಹ ಪಡೆಯಲಾಗುತ್ತದೆ ಎಂದು ಉತ್ತರಿಸಿದರು.

7. ಪ್ರೊ. ಮುಜಾಫರ್ ಹೆಚ್ ಅಸ್ಸಾದಿರವರು ಮಾತನಾಡಿ, ತಮಗೆ ಸೀನಿಯರ್ ಪ್ರೊಫೆಸರ್ ಗ್ರೇಡ್ ಅನ್ನು ಆದಷ್ಟು ಬೇಗನೇ ನೀಡಬೇಕಾಗಿ ಮನವಿ ಮಾಡಿಕೊಂಡರು, ಇದಕ್ಕುತ್ತರವಾಗಿ ಕುಲಸಚಿವರು ಆದಷ್ಟು ಬೇಗ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

೮. ಪ್ರೊ. ಮುಜಾಫರ್ ಹೆಚ್ ಅಸ್ಸಾದಿರವರು ಮಾತನಾಡಿ, ಪ್ರೊ. ಜಿ.ಕೆ ವೆಂಕಟೇಶ್‌ಕುಮಾರ್, ಮಾಜಿ ಸಿಂಡಿಕೇಟ್ ಸದಸ್ಯರು ಹಾಗೂ ನಿವೃತ್ತ ಪ್ರಾಧ್ಯಾಪಕರು, ಮನೋವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಪಿಂಚಣಿ ಸೌಲಭ್ಯ ನೀಡಿರುವುದಿಲ್ಲ, ಹಾಲಿ ವಿಭಾಗದ ಅಧ್ಯಕ್ಷರು ಬೇಬಾಕಿ ಪತ್ರ ನೀಡದೆ ತೊಂದರೆ ನೀಡುತ್ತಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಿಭಾಗದ ಅಧ್ಯಕ್ಷರೊಂದಿಗೆ ಈಗಾಗಲೇ ಮಾತನಾಡಿದ್ದು, ಅವರ ಪ್ರಕಾರ ಪ್ರೊ. ಜಿ.ಕೆ ವೆಂಕಟೇಶ್ ಕುಮಾರ್‌ರವರು ವಿಭಾಗಕ್ಕೆ ಸಂಬಂಧಿಸಿದ ವಿವರಗಳು/ದಾಖಲೆಗಳು ಸ್ಪಷ್ಟವಾಗಿ ನೀಡಿರುವುದಿಲ್ಲ ಹಾಗಾಗಿ ಸದರಿಯವರಿಗೆ ವಿಭಾಗದ **ಬೇಬಾಕಿ ಪ್ರಮಾಣ ಪತ್ರ** ನೀಡಿರುವುದಿಲ್ಲ ಎಂದು ತಿಳಿಸಿರುತ್ತಾರೆ, ಹಾಗಾಗಿ ಅವರಿಗೆ ಪಿಂಚಣಿ ಸೌಲಭ್ಯ ನೀಡಿರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

೯. ಪ್ರೊ. ಮುಜಾಫರ್ ಹೆಚ್ ಅಸ್ಸಾದಿರವರು ಮಾತನಾಡಿ, ಸ್ವಯಂ ಹಣಕಾಸು ಯೋಜನೆಯಡಿ ಪ್ರಾರಂಭವಾದ ೦೫ ವಿಭಾಗಗಳಿಗೆ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರನ್ನು ನೇಮಕ ಮಾಡಲಾಗಿರುತ್ತದೆ. ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗದಲ್ಲಿ ಸ್ವಯಂ ಹಣಕಾಸು ಯೋಜನೆಯಡಿ ನೇಮಕವಾಗಿರುವ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳಿಗೆ ನೇಮಕಾತಿ ಆದೇಶ ಹಾಗೂ ವೇತನ ಸಹ ನೀಡಿರುವುದಿಲ್ಲ, ಅಲ್ಲಿ ತರಗತಿಗಳು ಹೇಗೆ ನಡೆಯಬೇಕು ಎಂದು ಪ್ರಶ್ನಿಸಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ, ಸೆಮಿಸ್ಟರ್ ಅವಧಿಯು ಈಗಾಗಲೇ ಅರ್ಧ ಮುಗಿದಿರುವುದರಿಂದ ಮುಂದಿನ ಶೈಕ್ಷಣಿಕ ವರ್ಷಕ್ಕೆ ಹೊಸದಾಗಿ ಅತಿಥಿ ಉಪನ್ಯಾಸಕರ ಅರ್ಜಿ ಆಹ್ವಾನಿಸುವಾಗ ಸ್ವಯಂ ಹಣಕಾಸು ಯೋಜನೆಯಡಿ (SFS) ನೇಮಕವಾಗಿರುವ ಸಹಾಯಕ ಪ್ರಾಧ್ಯಾಪಕರ ವಿವರಗಳನ್ನು ಮುಂದಿನ ಸಿಂಡಿಕೇಟ್ ಸಭೆಗೆ ಚರ್ಚಿಸಿ ನಿರ್ಧರಿಸುವ ಸಲುವಾಗಿ ವಿಷಯ ಮಂಡಿಸಲಾಗುವುದೆಂದು ತಿಳಿಸಿದರು.

10. ಪ್ರೊ. ಮುಜಾಫರ್ ಹೆಚ್ ಅಸ್ಸಾದಿರವರು ಮಾತನಾಡಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀಮತಿ ಸುಮತಿರವರನ್ನು ಮಹಾರಾಜ ಕಾಲೇಜಿಗೆ ವರ್ಗಾವಣೆ ಮಾಡಿದ ಹಿನ್ನೆಲೆಯಲ್ಲಿ ಸದರಿಯವರು ನ್ಯಾಯಾಲಯದ ಮೊರೆ ಹೋಗಿರುತ್ತಾರೆ. ನ್ಯಾಯಾಲಯವು ಯಥಾಸ್ಥಿತಿ ಕಾಪಾಡುವಂತೆ ಆದೇಶಿಸಿರುವುದರಿಂದ ವಿಶ್ವವಿದ್ಯಾನಿಲಯ ನೀಡಿದ ಆದೇಶ ಹಿಂಪಡೆದಿದ್ದು, ಶ್ರೀಮತಿ ಸುಮತಿರವರ ವರ್ತನೆ ತೀರ ಮುಜುಗರ ಉಂಟು ಮಾಡುವಂತದಾಗಿದೆ. ವಿಭಾಗದ ಅಧ್ಯಕ್ಷರುಗಳಿಗೆ ಗೌರವ ನೀಡದೆ, ಏರುಧ್ವನಿಯಲ್ಲಿ ಮಾತನಾಡುತ್ತಾರೆ ಎಂದು ತಿಳಿಸಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ, ಅತಿಥಿಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀಮತಿ ಸುಮತಿರವರ ಪರವಾಗಿ ನ್ಯಾಯಾಲಯ ಆದೇಶ ನೀಡಿದ್ದು, ಅದರಂತೆ ವಿಶ್ವವಿದ್ಯಾನಿಲಯ ಕ್ರಮಕೈಗೊಂಡಿದೆ ಎಂದು ತಿಳಿಸಿದರು.

11. ಮೀನು ಪಾಶುವಾರು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಿಲ್ಲ ಹಾಗೂ ಎಂ.ಎಡ್.ಗೆ ಸಂಬಂಧಿಸಿದ ದೂರಿನ ಬಗ್ಗೆ ಡಾ. ಚೈತ್ರನಾರಾಯಣರವರು ಪ್ರಶ್ನಿಸಿದರು ಇದಕ್ಕುತ್ತರವಾಗಿ ಕುಲಸಚಿವರು ಅವರ ಸಮಸ್ಯೆಯನ್ನು ಪರಿಹರಿಸಲಾಗಿದೆ ಎಂದು ತಿಳಿಸಿದರು.

12. ಪ್ರೊ. ಮುಜಾಫರ್ ಹೆಚ್ ಅಸ್ಸಾದಿರವರು ಮಾತನಾಡಿ, ಏರ್‌ಟೆಲ್ ಕಂಪನಿಗೆ ಟವರ್ ಸ್ಥಾಪಿಸುವ ಕುರಿತು ಹಾಗೂ ಮಾನವಿಕ ಸಭಾಂಗಣದಲ್ಲಿ ಲಿಫ್ಟ್ ಸೌಲಭ್ಯ ಒದಗಿಸುವಂತೆ ಕೋರಿದರು. ಇದಕ್ಕುತ್ತರವಾಗಿ ಕುಲಸಚಿವರು ಮಾತನಾಡಿ, ಏರ್‌ಟೆಲ್ ಕಂಪನಿಗೆ ಟವರ್ ಸ್ಥಾಪಿಸುವ ಸಂಬಂಧ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು ಹಾಗೂ ಮಾನ್ಯ ಕುಲಪತಿಗಳು ಮಾತನಾಡಿ, ಮಾನವಿಕ ಸಭಾಂಗಣದಲ್ಲಿ ಲಿಫ್ಟ್ ಸೌಲಭ್ಯ ಒದಗಿಸುವುದರ ಕುರಿತು ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

13. ಪ್ರೊ. ಮುಜಾಫರ್ ಹೆಚ್ ಅಸ್ಸಾದಿರವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲಾದ ಇತರೆ ವಿಷಯವನ್ನು ಜಾಲತಾಣದಲ್ಲಿ ಪ್ರಕಟಿಸಿರುವುದಿಲ್ಲ ಏಕೆ? ಎಂದು ಪ್ರಶ್ನಿಸಿದರು ಇದಕ್ಕುತ್ತರವಾಗಿ ಕುಲಸಚಿವರು ಮಾತನಾಡಿ, ಇತರೆ ವಿಷಯವನ್ನು ಸಹ ಜಾಲತಾಣದಲ್ಲಿ ಆಪ್‌ಲೋಡ್ ಮಾಡುವುದಾಗಿ ತಿಳಿಸಿದರು.

ಅಂತಿಮವಾಗಿ, ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕರಿಸಿದ ಅಧ್ಯಕ್ಷರು ಹಾಗೂ ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ ಕುಲಸಚಿವರು ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಸದಸ್ಯ ಕಾರ್ಯದರ್ಶಿ ಹಾಗೂ ಕುಲಸಚಿವ

ಅಧ್ಯಕ್ಷರು ಹಾಗೂ ಕುಲಪತಿಗಳು